# ``ಫ್ಲಿಪ್ ಕಾರ್ಟ್ ಲೀಪ್'' ಕಾರ್ಯಕ್ರಮಕ್ಕೆ ಎಂಟು ಸ್ಟಾರ್ಟಪ್ ಗಳು ಆಯ್ಕೆ

- **ಐದು ವಿಭಾಗಗಳಲ್ಲಿ ಬಂದಿದ್ದ 920 ಅರ್ಜಿಗಳ ಪೈಕಿ ಎಂಟು ಕಂಪನಿಗಳ ಆಯ್ಕೆ**
- **ಅಂತಿಮಗೊಂಡು ಸ್ಟಾರ್ಟಪ್ ಗಳಿಗೆ 16 ವಾರಗಳ ಮೆಂಟರ್ ಶಿಪ್ ಕಾರ್ಯಕ್ರಮ**
- **ಇವುಗಳಿಗೆ ದೊರೆಯಲಿದೆ 25,000 ಯುಎಸ್ ಡಾಲರ್ ಮೊತ್ತದ ಈಕ್ವಿಟಿ-ಫ್ರೀ ಗ್ರಾಂಟ್**

ಬೆಂಗಳೂರು, ಜನವರಿ 12, 2021: ಭಾರತದ ಸ್ವದೇಶಿ ಇ-ಕಾಮರ್ಸ್ ಮಾರುಕಟ್ಟೆಯಾದ ಫ್ಲಿಪ್ ಕಾರ್ಟ್ ತನ್ನ ಸ್ಟಾರ್ಟಪ್ ವೇಗವರ್ಧಕ ಕಾರ್ಯಕ್ರಮವಾದ ಫ್ಲಿಪ್ ಕಾರ್ಟ್ ಲೀಪ್ ಅನ್ನು ಆರಂಭಿಸಿದೆ. ಸರ್ಕಾರದ `ಸ್ಟಾರ್ಟಪ್ ಇಂಡಿಯಾ' ಅಭಿಯಾನವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಭಾರತದ ಔದ್ಯಮಿಕ ಪರಿಸರ ವ್ಯವಸ್ಥೆಯ ಬೆಳವಣಿಗೆಗೆ ಪೂರಕವಾಗಿ ಈ ಕಾರ್ಯಕ್ರಮವನ್ನು ಆರಂಭಿಸಿದೆ. ಇದರ ಪ್ರಮುಖ ಉದ್ದೇಶ ಮುಂಬರುವ ಸ್ಟಾರ್ಟಪ್ ಗಳ ಬೆಳವಣಿಗೆ, ಅವುಗಳ ಮಟ್ಟ, ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಮಾರ್ಗದರ್ಶನ ನೀಡುವುದು ಸೇರಿದಂತೆ ಒಟ್ಟಾರೆ ಸರ್ವಾಂಗೀಣ ಬೆಳವಣಿಗೆಗೆ ನೆರವಾಗುವುದಾಗಿದೆ. ಈ ಕಾರ್ಯಕ್ರಮಕ್ಕಾಗಿ ಐದು ವಿಭಾಗಗಳಾದ ಡಿಸೈನ್ & ಮೇಕ್ ಫಾರ್ ಇಂಡಿಯಾ, ಇನ್ನೋವೇಶನ್ಸ್ ಇನ್ ಡಿಜಿಟಲ್ ಕಾಮರ್ಸ್, ಟೆಕ್ನಾಲಾಜೀಸ್ ಟು ಎಂಪವರ್ ರೀಟೇಲ್, ಎಸ್ ಸಿಎಂ & ಲಾಜಿಸ್ಟಿಕ್ಸ್ ಹಾಗೂ ಎನೇಬ್ಲಿಂಗ್ ಡೀಪ್ ಟೆಕ್ ಅಪ್ಲಿಕೇಶನ್ಸ್ ನಲ್ಲಿ 920 ಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದವು. ಈ ಪೈಕಿ ಕಠಿಣವಾದ ನಾಲ್ಕು ಪರಿಶೀಲನೆ ಪ್ರಕ್ರಿಯೆಗಳ ನಂತರ 8 ಸ್ಟಾರ್ಟಪ್ ಗಳನ್ನು ಅಂತಿಮಗೊಳಿಸಲಾಗಿದೆ. ಆಯ್ಕೆಯಾಗಿರುವ ಎಂಟು ಸ್ಟಾರ್ಟಪ್ ಗಳೆಂದರೆ ಎಎನ್ಎಸ್ ಕಾಮರ್ಸ್, ಎಂಟ್ರೋಪಿಕ್ ಟೆಕ್, ಫಶಿನ್ಝಾ, ಗಲ್ಲಿ ನೆಟ್ ವರ್ಕ್, ಪಿಗ್ಗಿ, ಟ್ಯಾಗ್ ಬಾಕ್ಸ್ ಸಲೂಶನ್ಸ್, ಅನ್ ಬಾಕ್ಸ್ ರೋಬೋಟಿಕ್ಸ್ ಮತ್ತು ವೋಕುಸ್ ಟೆಕ್ನಾಲಾಜಿ.

ಈ ಅಂತಿಮಗೊಂಡಿರುವ ಸ್ಟಾರ್ಟಪ್ ಗಳಿಗೆ ಸತತ 16 ವಾರಗಳ ಮೆಂಟರ್ ಶಿಪ್ ಕಾರ್ಯಕ್ರಮವನ್ನು ನೀಡಲಾಗುತ್ತದೆ. ಇಲ್ಲಿ ಫ್ಲಿಪ್ ಕಾರ್ಟ್ ನ ನಾಯಕರು ಮತ್ತು ವಿವಿಧ ಉದ್ಯಮಗಳ ಪರಿಣತರು ತರಬೇತಿಯನ್ನು ನೀಡಲಿದ್ದಾರೆ. ವೆಂಚರ್ ಡೆವಲಪ್ ಮೆಂಟ್ ಬಗ್ಗೆ ಸ್ಟಾರ್ಟಪ್ ಗಳಿಗೆ ಜ್ಞಾನವನ್ನು ನೀಡಲಾಗುತ್ತದೆ ಮತ್ತು ಈ ಆಯ್ಕೆಗೊಂಡಿರುವ ಸ್ಟಾರ್ಟಪ್ ಗಳಿಗೆ ಪಾಲುದಾರಿಕೆಗಳನ್ನು ಎರಡು ವಿಭಿನ್ನ ಮಾರ್ಗದಲ್ಲಿ ಖಾತರಿಪಡಿಸಲಾಗುತ್ತದೆ. ಮೊದಲ ಮಾರ್ಗದಲ್ಲಿ ಒನ್-ಆನ್-ಒನ್ ಬ್ಯುಸಿನೆಸ್ ಮತ್ತು ತಾಂತ್ರಿಕ ಮೆಂಟರ್ ಶಿಪ್, ಮಾಸ್ಟರ್ ಕ್ಲಾಸಸ್ ಹಾಗೂ ವೆಂಚರ್ ಡೆವಲಪ್ ಮೆಂಟ್ ನಲ್ಲಿ ನೆಟ್ ವರ್ಕ್ ಮಾಡುವ ಬಗೆಯನ್ನು ಹೇಳಿಕೊಡಲಾಗುತ್ತದೆ. ಭಾರತದಲ್ಲಿ ಬ್ಯುಸಿನೆಸ್ ಅನ್ನು ಉತ್ತಮ ಮಟ್ಟದಲ್ಲಿ ವೃದ್ಧಿಸಿಕೊಳ್ಳಲು ಪೂರಕವಾಗಿ ಟೂಲ್ಸ್ ಮತ್ತು ಅತ್ಯುತ್ತಮ ಪದ್ಧತಿಗಳನ್ನು ಹೇಳಿಕೊಡಲಾಗುತ್ತದೆ. ಎರಡನೇ ಮಾರ್ಗದಲ್ಲಿ ಸ್ಟಾರ್ಟಪ್ ಗಳು ಫ್ಲಿಪ್ ಕಾರ್ಟ್ ಪ್ಲಾಟ್ ಫಾರ್ಮ್ ನಲ್ಲಿ

ಸೂಕ್ತವಾದ ಬ್ಯುಸಿನೆಸ್ ಘಟಕಗಳೊಂದಿಗೆ ಪಾಲುದಾರಿಕೆಯನ್ನು ಯಾವ ರೀತಿ ಸಾಧಿಸಬಹುದು ಎಂಬುದರ  ಅವಕಾಶಗಳನ್ನು ಅನ್ವೇಷಿಸಲಾಗುತ್ತದೆ. ಇದಲ್ಲದೇ, ಅಂತಿಮವಾಗಿ ಆಯ್ಕೆಯಾಗುವ ಸ್ಟಾರ್ಟಪ್ ಗಳು 25,000 ಯುಎಸ್ ಡಾಲರ್ ಗಳ ಈಕ್ವಿಟಿ-ಫ್ರೀ ಗ್ರ್ಯಾಂಟ್ ಅನ್ನು ಗಳಿಸಲಿವೆ.

ಈ ಬಗ್ಗೆ ಮಾತನಾಡಿದ ಫ್ಲಿಪ್ ಕಾರ್ಟ್ ನ ಪ್ರಾಡಕ್ಟ್ ಸ್ಟ್ರಾಟೆಜಿ ಅಂಡ್ ಡೆಪ್ಲಾಯ್ ಮೆಂಟ್ ನ ಉಪಾಧ್ಯಕ್ಷ ನರೇನ್ ರಾವುಲಾ ಅವರು, ``ಫ್ಲಿಪ್ ಕಾರ್ಟ್ ಲೀಪ್ ನೊಂದಿಗೆ ನಾವು ಭರವಸೆಯ ಸ್ಟಾರ್ಟಪ್ ಗಳನ್ನು ಪೋಷಿಸುವ ಗುರಿಯನ್ನು ಹೊಂದಿದ್ದೇವೆ. ಅಲ್ಲದೇ, ಗ್ರಾಹಕರಿಗೆ ಉತ್ತಮವಾದ ರೀತಿಯ ಪರಿಹಾರಗಳನ್ನು ನೀಡುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ರೂಪಿಸಲಿದ್ದೇವೆ. ಅದೇ ರೀತಿ ಉದ್ಯಮಕ್ಕೆ ಉತ್ತಮ ಮೌಲ್ಯವನ್ನು ತರುವ ನಿಟ್ಟಿನಲ್ಲಿ ಸ್ಟಾರ್ಟಪ್ ಗಳಿಗೆ ಸಹಾಯ ಮಾಡುತ್ತೇವೆ. ಈ ಕಾರ್ಯಕ್ರಮಕ್ಕಾಗಿ ನಾವು ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಅಭೂತಪೂರ್ವವಾಗಿದ್ದು, ಉತ್ತೇಜನಕಾರಿಯಾಗಿದೆ. ಈ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿದ ನಂತರ ನಾವು ಎಂಟು ಸ್ಟಾರ್ಟಪ್ ಗಳನ್ನು ಅಂತಿಮವಾಗಿ ಆಯ್ಕೆ ಮಾಡಿದ್ದು, ಅವುಗಳೊಂದಿಗೆ ಕೆಲಸ ಮಾಡಲು ಎದುರು ನೋಡುತ್ತಿದ್ದೇವೆ. ಈ ಕಾರ್ಯಕ್ರಮದಡಿ ನಾವು ಅವರಿಗೆ ಸೂಕ್ತವಾದ ಮಾರ್ಗದರ್ಶನ ನೀಡಲಿದ್ದೇವೆ ಮತ್ತು ಉದ್ಯಮದ ಮಾನ್ಯತೆ ಹಾಗೂ ಕಾರ್ಯತಂತ್ರದ ಸಹಭಾಗಿತ್ವದ ಮೂಲಕ ಅವರಿಗೆ ಬೆಂಬಲವನ್ನು ನೀಡುತ್ತೇವೆ'' ಎಂದು ತಿಳಿಸಿದರು.

**About the shortlisted finalists:**

| | |
|---|---|
| **ANS Commerce** | A full-stack e-commerce enabler for online brands. It provides end-to-end solutions that include brand store tech platform, performance marketing, marketplace management and e-commerce warehousing and fulfillment. |
| **Entropik Tech** | India's first Emotion AI company. It has patented technologies that help brands measure the cognitive and emotional response of consumers towards product experiences, media campaigns and brand content, thereby unlocking consumer behavioral insights for brands to deliver superlative experiences. |
| **Fashinza** | A managed marketplace that is democratizing global fashion manufacturing to help brands become more agile, demand-driven and profitable. It allows fashion brands across the world to access manufacturing capacity on-demand and assists them from design to delivery. |
| **Gully Network** | A tech-enabled retail network for mid-size grocery stores. It partners with existing grocery stores and transforms them into GULLYMART franchise stores with a view to improve income and enable end-to-end automation. |
| **Piggy** | A startup that enables a modern banking experience for Indian consumers by offering a personal finance hub that combines payments, credit, investments, insurance, and more. The company focuses on savings and has in-built automatic wealth management. |
| **Tagbox Solutions** | A startup that provides supply chain monitoring solutions using IoT, ML and AI to help organizations solve problems related to |

| | |
|---|---|
| | product quality and compliance, traceability, and operational efficiency. It provides an array of services to F&B, pharma and hi-tech/industrial companies. |
| **Unbox Robotics** | Builds a plug-and-play system of AI-powered mobile robots that sort packages in vertical space and improve personnel productivity fivefold in less than 50-70% of the area required by existing methods. It has already onboarded some of the leading logistics and e-commerce players in Indian and overseas. |
| **Wolkus Technology (Fasal)** | An IoT-based AI-powered intelligence platform for horticulture crops. It captures real-time data on conditions from on-farm sensors and delivers farm-specific, crop-specific and crop-stage-specific actionable recommendations to farmers over mobile phones in vernacular languages through the "Fasal" app. |

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and Flipkart Wholesale. Started in 2007, Flipkart has enabled millions of consumers, sellers, merchants, and small businesses to be a part of India's e-commerce revolution, with a registered customer base of over 300 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs have inspired us to innovate on many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market and now Flipkart Wholesale, the Flipkart Group will continue to steer the transformation of commerce in India through technology.

**For more information, please contact media@flipkart.com**